

# ವಿಜಯವಾಣಿ

ಕನ್ನಡಿಗರ ಧ್ವನಿ

ನಂ. 1 ಕನ್ನಡ ದಿನಪತ್ರಿಕೆ

ಬೆಂಗಳೂರು · ಮಂಗಳೂರು · ಹುಬ್ಬಳ್ಳಿ · ವಿಜಯಪುರ · ಮೈಸೂರು · ಗಂಗಾವತಿ · ಚಿತ್ರದುರ್ಗ · ಶಿವಮೊಗ್ಗ · ಕಲಬುರಗಿ · ಬೆಳಗಾವಿ

VIJAYAVANI ● MANGALURU

ಮಂಗಳೂರು ● ಸಂಪುಟ 7 ● ಸಂಚಿಕೆ

vijayavani.net · ಇ-ಪೇಪರ್: epapervijayavani.in · VVani4U · @VVANI4U · vijayavaninews@gmail.com · ಸಹಾಯವಾಣಿ: 8884411682

4 ಜೂನ್ 2018 | ಸೋಮವಾರ


**ಮುಂಜಾನೆ ಮಾತು**

ಪಿಯಾನೋದಲ್ಲಿರುವ ಬಿಳಿ ಮತ್ತು ಕಪ್ಪು ಕೀಲಿಗಳು ಸುಖ ದುಃಖಗಳನ್ನು ಪ್ರತಿನಿಧಿಸುತ್ತವೆ. ಅವುಗಳ ಸರಿಯಾದ ಬಳಕೆಯಿಂದ ಮಧುರ ಸಂಗೀತ ಪಡೆದು ಆನಂದ ಅನುಭವಿಸೋಣ.

ಬಡ್ಡಿ ಸಮೇತ ವಸೂಲಿಗೆ ಸಮಿತಿ ಕೊಟ್ಟ ವರದಿ ಧೂಳು | 5ರಿಂದ ಸಿಇಟಿ ದಾಖಲೆ ಪರಿಶೀಲನೆ

# ವೃತ್ತಿಪರ ಕೋರ್ಸ್‌ಗೆ ಹೆಚ್ಚುವರಿ ಶುಲ್ಕ ವಸೂಲಿ ಭಯ

■ ದೇವರಾಜ್ ಎಲ್. ಬೆಂಗಳೂರು

ಸಿಇಟಿ ದಾಖಲಾತಿ ಪರಿಶೀಲನೆ ಜೂ.5ರಿಂದ ನಡೆಯಲಿದ್ದು, ವಿದ್ಯಾರ್ಥಿಗಳು ಹಾಗೂ ಪಾಲಕರಿಗೀಗ ಶುಲ್ಕದ ಹೆಸರಲ್ಲಿ ಕಾಲೇಜು ಆಡಳಿತ ಮಂಡಳಿಗಳು ಎಷ್ಟು ಹಣ ಕೀಳುತ್ತವೋ? ಎಂಬ ಭಯ ಶುರುವಾಗಿದೆ. ವೃತ್ತಿಪರ ಕೋರ್ಸ್‌ಗಳಿಗೆ ದುಪ್ಪಟ್ಟು ಶುಲ್ಕ ಪಡೆಯುತ್ತಿದ್ದ ಖಾಸಗಿ ಕಾಲೇಜುಗಳ ವಿರುದ್ಧ ಪ್ರವೇಶ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಆನಂದ್ ಬೈರಾರೆಡ್ಡಿ ಕೂಲಂಕಷ ಅಧ್ಯಯನ ನಡೆಸಿ ಶೇ.18 ಬಡ್ಡಿ ಸಹಿತ ಶುಲ್ಕವನ್ನು ಒಂದು ತಿಂಗಳೊಳಗೆ ಹಿಂತಿರುಗಿಸಬೇಕೆಂದು ತಿಳಿಸಿ, 2017 ಸೆಪ್ಟೆಂಬರ್‌ನಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ನೀಡಿದ್ದರು. ಆದರೆ, ಈವರೆಗೆ ವರದಿ ಅನುಷ್ಠಾನಕ್ಕೆ ಸರ್ಕಾರ ಆಸಕ್ತಿ ತೋರಿಲ್ಲ. ಇದರಿಂದಾಗಿ ಇಂಜಿನಿಯರಿಂಗ್, ವೈದ್ಯ ಮತ್ತು ದಂತವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಶುಲ್ಕ ಅನಿಶ್ಚಿತತೆಯಿಂದ ಕೂಡಿದೆ.

ಸರ್ಕಾರ ನೆಪ ಮಾತ್ರಕ್ಕೆ ಸಮಿತಿ ರಚನೆ ಮಾಡುತ್ತಿದೆ. ನಿಜವಾಗಿ ಖಾಸಗಿ ಕಾಲೇಜುಗಳ ಎಡೆಮುರಿ ಕಟ್ಟಬೇಕಾದಲ್ಲಿ ಬೈರಾರೆಡ್ಡಿ ಸಮಿತಿ ವರದಿ ಅನುಷ್ಠಾನ ಮಾಡಬೇಕಾಗಿತ್ತು ಎಂದು ಪಾಲಕರು, ವಿದ್ಯಾರ್ಥಿ ಸಂಘಟನೆಗಳು ಒತ್ತಾಯಿಸಿವೆ. 2 ವರ್ಷಗಳ ಹಿಂದೆ ಇದೇ ರೀತಿ ಸಮಿತಿ ರಚನೆ ಮಾಡಿದ್ದರು. ಆದರೆ, ಸಮಿತಿ ಕೇವಲ ದೂರು ಸ್ವೀಕರಿಸಿ, ಹೆಚ್ಚುವರಿ ಶುಲ್ಕ ಪಡೆದ ಕಾಲೇಜಿಗೆ ಕರೆ ಮಾಡಿ ಹಣ ಹಿಂತಿರುಗಿಸುವಂತೆ ಸೂಚಿಸಿತ್ತು. ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿರುವ ಕಾಲೇಜುಗಳ ಪಟ್ಟಿಯನ್ನು ಸಮಿತಿ ಕೇಳಿತ್ತು. 15 ವೈದ್ಯಕೀಯ, 15 ದಂತವೈದ್ಯಕೀಯ ಕಾಲೇಜುಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಯಾವುದಕ್ಕೆ ಎಷ್ಟು ಶುಲ್ಕ ಪಡೆಯಲಾಗುತ್ತಿದೆ ಎಂಬ ಮಾಹಿತಿಯನ್ನು ಪ್ರಕಟಿಸಿದ್ದು, ವಸೂಲಿ ಜವಾಬ್ದಾರಿಯನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ನೀಡಿತ್ತು.

ಆ ಪ್ರಕಾರವಾಗಿ 2017-18ನೇ ಸಾಲಿಗೆ ಖಾಸಗಿ ಕಾಲೇಜಿನ ಸರ್ಕಾರಿ ಕೋಟಾದ ಇಂಜಿನಿಯರಿಂಗ್ ಸೀಟುಗಳಿಗೆ 50,500, 56,000 ರೂ. ನಿಗದಿ ಪಡಿಸಿತ್ತು. ಇದೇ ರೀತಿ ಖಾಸಗಿ ಕಾಲೇಜಿನ ಸರ್ಕಾರಿ ಕೋಟಾದ ವೈದ್ಯ ₹77,000, ಖಾಸಗಿ ಸೀಟು ₹6,32,500, ಬಿ-ಫಾರ್ಮಾ, ಫಾರ್ಮಾ-ಡಿ ಕೋರ್ಸ್‌ಗೆ ₹21,430 ನಿಗದಿ ಪಡಿಸಿತ್ತು.

ಹೆಚ್ಚುವರಿ ಶುಲ್ಕ ಎಷ್ಟು?: ಹೆಚ್ಚುವರಿ ಶುಲ್ಕ ಪಡೆದ ಕಾಲೇಜುಗಳಲ್ಲಿ ಸುಳ್ಯದ ಪ್ರತಿಷ್ಠಿತ ಕಾಲೇಜೊಂದು ಮೊದಲ ಸ್ಥಾನದಲ್ಲಿದ್ದರೆ. ದಾವಣಗೆರೆಯಲ್ಲಿರುವ ಕಾಲೇಜೊಂದು 15,150 ರೂ. ಪಡೆಯುವ ಮೂಲಕ ಹೆಚ್ಚವರಿ ಶುಲ್ಕ ಪಡೆದ ಕಾಲೇಜುಗಳಲ್ಲಿ ಅತೀ ಕಡಿಮೆ ಶುಲ್ಕ ಪಡೆದ ಕಾಲೇಜಾಗಿತ್ತು.



ಸಾಂದರ್ಭಿಕ ಚಿತ್ರ

## ಮರು ದಿನವೇ ರಾಜೀನಾಮೆ

ಹೆಚ್ಚುವರಿ ಶುಲ್ಕ ಪಡೆದಿರುವ ಕಾಲೇಜುಗಳು ಬಡ್ಡಿ ಸಮೇತ ಹಣ ಹಿಂತಿರುಗಿಸಿಬೇಕೆಂದು ಶಿಫಾರಸು ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿದ ಮರು ದಿನವೇ ಸಮಿತಿ ಅಧ್ಯಕ್ಷ ಆನಂದ ಬೈರಾರೆಡ್ಡಿ ರಾಜೀನಾಮೆ ನೀಡಿದ್ದರು. ಸರ್ಕಾರ ಹೊರಡಿಸಿದ ನೇಮಕಾತಿ ಆದೇಶದಲ್ಲಿ ಮುಂದಿನ ಒಂದು ವರ್ಷದವರೆಗೆ ಅಧ್ಯಕ್ಷರಾಗಿ ಮುಂದುವರಿಯಬಹುದು ಎಂದು ತಿಳಿಸಿದ್ದರೂ, 8 ತಿಂಗಳಲ್ಲೇ ಕೆಲಸ ಮುಗಿಸಿ ಹೊರನಡೆದಿದ್ದರು.

## ದಾಖಲಾತಿ ಪರಿಶೀಲನೆ

ಜೂ.5 ಅಂಗವಿಕಲ, ಕ್ರೀಡಾ ಕೋಟಾ

ಜೂ.6 ಎನ್‌ಸಿಸಿ ಕೋಟಾ

ಜೂ.7ರಿಂದ ಸಾಮಾನ್ಯ ವರ್ಗ (ರ್‍ಯಾಂಕ್ 1ರಿಂದ)